

# ಶ್ರದ್ಧೆ ಇದ್ದರೆ ಅವಕಾಶಕ್ಕೆ ಬರವಿಲ್ಲ!

## ದೀಕ್ಷಿತ್ ಶೆಟ್ಟಿ

ಝೀ ಕನ್ನಡದ 'ನಾಗಿಣಿ'ಯ ಅರ್ಜುನ್

★ *ಅಭಿನಯಕ್ಕೆ ಪ್ರವೇಶ ಪಡೆದಿದ್ದು ಹೇಗೆ?*

ಹದಿಹರೆಯದಲ್ಲಿಯೇ ಬಣ್ಣದ ಮೋಹ ನನ್ನ ಮನದಲ್ಲಿ ಮೊಳಕೆಯೊಡೆಯಿತು. ನಟನೆಯನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಸಂಬಂಧ ನಟನಾ ತರಬೇತಿ ಸಂಸ್ಥೆಗೆ ಸೇರಿದೆ. ಅಲ್ಲಿ ಉಷಾ ಭಂಡಾರಿ ನನಗೆ ಸೂಕ್ತ ಮಾರ್ಗದರ್ಶನದ ಜೊತೆಗೆ ಒಳ್ಳೆಯ ತರಬೇತಿಯನ್ನೂ ನೀಡಿದರು. ಹಗಲು ರಾತ್ರಿ ಎನ್ನದೆ ನಿರಂತರವಾಗಿ ಅಲ್ಲಿ ನಟನೆಯನ್ನು ಅಭ್ಯಾಸ ಮಾಡಲು ಅವಕಾಶ ನೀಡಿದರು. ಅಲ್ಲಿಂದ ಒಂದೊಂದೆ ಹಜ್ಜೆ ಹಾಕುತ್ತಾ ನಟನಾಗುತ್ತಾ ಸಾಗುತ್ತಿದ್ದೇನೆ.

★ *ಇಂತಹ ಪಾತ್ರಕ್ಕೆ ಜೀವ ತುಂಬುವ ಕ್ರಿಯೆ ಹೇಗನ್ನಿಸುತ್ತದೆ?*

ಪಾತ್ರದಲ್ಲಿ ನಾನಲ್ಲದ ನಾನಾಗಿ ಕಾಣಿಸಿಕೊಳ್ಳುವುದು ಖುಷಿ ಎನ್ನಿಸುತ್ತದೆ. ಕಥೆ ಮೇಲಿನ ವಿಶ್ವಾಸ ಅವರವರ ನಂಬಿಕೆಗೆ ಬಿಟ್ಟಿದ್ದು. ಜನರಿಗಂತೂ 'ನಾಗಿಣಿ' ಇಷ್ಟವಾಗಿದೆ. ಕಥೆ ಮುಂದೆ ಏನಾಗುತ್ತದೆ ಎನ್ನುವುದು ಈಗ ನನಗೆ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ನಾಗ ದೋಷ ಇದೆ ಎನ್ನುವುದು ಗೊತ್ತಿದೆ. ಅದರ ನಿವಾರಣೆಗೆ ಪೂಜೆಗಳನ್ನು ನೆರವೇರಿಸಿದ್ದೇವೆ.

ಪಾತ್ರದಲ್ಲಿ ಕಾಣಿಸಿಕೊಂಡ ಯಾವುದೇ ನಟ– ನಟಿಯರಿಗೆ ಮುಖ್ಯವಾಗಿ ಬೇಕಾಗಿರುವುದು ಸಾಮಾಜಿಕ ಮನ್ನಣೆ. ನಮ್ಮ ಅಭಿನಯವನ್ನು ಜನ ಸ್ವೀಕರಿಸಬೇಕು. ನಮ್ಮನ್ನು ಗುರುತಿಸಬೇಕು. ನನ್ನಂತಹ ಒಬ್ಬ ಚಿಕ್ಕ ಕಲಾವಿದನನ್ನೂ ಜನ ಗುರುತಿಸಿದ್ದಾರೆ.

★ *ಗ್ರಾಫಿಕ್, ನಟನೆಯನ್ನು ಮಂಕಾಗಿಸುತ್ತಿದೆ ಅಂತ ಅನ್ನಿಸಲ್ವಾ?*

ಗ್ರಾಫಿಕ್ ತಾಂತ್ರಿಕವಾಗಿ ಪಾತ್ರಕ್ಕೆ ಸಹಾಯ ಮಾಡುತ್ತದೆ. ಇದರಿಂದ ಅಭಿನಯವೇನೂ ಹಿಂದೆ ಬೀಳುವುದಿಲ್ಲ. ನಟನೆಯನ್ನು ಆಧರಿಸಿಯೇ ಗ್ರಾಫಿಕ್ ವಿನ್ಯಾಸವನ್ನು ಮಾಡಿರುತ್ತಾರೆ. ಒಟ್ಟಾರೆ ಕಥೆ ನಿರೂಪಣೆಯಲ್ಲಿ ತಾಂತ್ರಿಕ ಕೆಲಸವೂ ಚೆನ್ನಾಗಿ ಮೂಡಿಬರುತ್ತಿದೆ.

★ *ನಟ ಆಗದಿದ್ದರೆ ಏನು ಮಾಡುವ ಯೋಚನೆ ಇತ್ತು?*

ನಟನೇ ಆಗಬೇಕು ಎಂದುಕೊಂಡಿದ್ದೆ. ಹಾಗೆ ಒಂದು ವೇಳೆ ಆಗದಿದ್ದರೆ ಬಹುಶಃ ವಕೀಲನಾಗುತ್ತಿದ್ದೆ. ಕಾನೂನು ಪದವಿಯನ್ನೂ ವ್ಯಾಸಂಗ ಮಾಡುತ್ತಿದ್ದೇನೆ. ಅದೇ ವೃತ್ತಿಯನ್ನು ಮಾಡುತ್ತಿದ್ದೆ, ಕರ್ನಾಟಕ ಆಡಳಿತ ಸೇವಾ ಪರೀಕ್ಷೆಗೆ ಅಣಿಯಾಗುತ್ತಿದ್ದೆ. ಈಗ ನನ್ನ ಆಶೆಯಂತೆ ನಟನಾಗುತ್ತಿದ್ದೇನೆ.

★ *ಅಭಿನಯಕ್ಕೆ ಮತ್ತೆ ಯಾವ ಸಿದ್ಧತೆಯನ್ನು ಮಾಡಿದಿರಿ?*

ರಂಗಭೂಮಿಯಲ್ಲಿ ತೊಡಗಿಕೊಂಡೆ. ಮೊದಲು 'ಅನೇಕ' ತಂಡದಲ್ಲಿ ಗುರುತಿಸಿಕೊಂಡಿದ್ದೆ. ಆಮೇಲೆ ಬೇರೆ ಬೇರೆ ತಂಡಗಳ ನಾಟಕಗಳನ್ನೂ ಆಡಿದ್ದೇನೆ. ಸದ್ಯ 'ಮಾಮಾ ಮೋಶೆ' ಎಂಬ ನಾಟಕದಲ್ಲಿ ನಟಿಸುತ್ತಿದ್ದೇನೆ. ಅದರ ತಾಲೀಮಿನ ಜೊತೆಗೆ ಟಿವಿಯಲ್ಲೂ ಮಾಡುತ್ತಿದ್ದೇನೆ.

★ *ಇದಕ್ಕೆಲ್ಲಾ ನಿಮ್ಮ ಕುಟುಂಬದ ಬೆಂಬಲ ಹೇಗಿದೆ?*

ಅಮ್ಮ ಶಶಿಕಲಾ, ಅಪ್ಪ ಸಂತೋಷ ಶೆಟ್ಟಿ. ಮೂಲತಃ ಕುಂದಾಪುರ ತಾಲ್ಲೂಕಿನ ಶಂಕರನಾರಾಯಣ ಸಮೀಪದ ಬೈಲೂರು ನಮ್ಮೂರು. ಪೋಷಕರು ಬೆಂಗಳೂರಿಗೆ ಬಂದು ನೆಲೆಸಿದ್ದಾರೆ. ನನ್ನ ಅಮ್ಮ ಎಲ್ಲಾ ಸಂದರ್ಭದಲ್ಲಿಯೂ ನನ್ನ ಬಯಕೆಯನ್ನೇ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ಆ್ಯಕ್ಟಿಂಗ್ ಸೇರಬೇಕು ಎಂದಾಗ ಕೂಡ ಅವರು ಕೂಡಿಟ್ಟ ಹಣವನ್ನೇ ನನಗೆ ನೀಡಿದ್ದಾರೆ. ಯಾವತ್ತೂ ಅವರು ನಕಾರಾತ್ಮಕವಾಗಿ 'ಅದನ್ನು ಮಾಡಬೇಡ, ಇದನ್ನು ಮಾಡಬೇಡ' ಅಂತ ಅಂದಿಲ್ಲ.

★ *ಟಿವಿಯಾನ ಹೇಗಿದೆ?*

'ಪ್ರೀತಿ ಅಂದರೇನು' ನನ್ನ ಮೊದಲ ಧಾರಾವಾಹಿ. ಇದರಲ್ಲಿ ನನ್ನದು ಪೋಷಕ ಪುಟ್ಟ ಪಾತ್ರ. ಆನಂತರ 'ಸಾಕ್ಷಿ'ಯಲ್ಲಿ ಅವಕಾಶ ಸಿಕ್ಕಿತು. ಅದಾದ ಮೇಲೆ ನಾಗಿಣಿ. ಇಷ್ಟು ಬೇಗ ಪ್ರಮುಖ ಪಾತ್ರನ್ನು ನಿರ್ವಹಿಸುತ್ತೇನೆ ಅಂತ ಅಂದುಕೊಂಡಿರಲಿಲ್ಲ. ಈಗ 'ಶ್ರೀ ಸ್ವರ್ಣ ಲತಾ ಪ್ರೊಡಕ್ಷನ್' ಸಿನಿಮಾ ಒಂದನ್ನು ಮಾಡುತ್ತಿದೆ. ಅದರಲ್ಲಿ ನಟಿಸುತ್ತಿದ್ದೇನೆ. ಈ ಯಾನಕ್ಕೆ ದಿಕ್ಸೂಚಿಯಾದ ಉಷಾ ಭಂಡಾರಿ ಅವರನ್ನು ಸ್ಮರಿಸುತ್ತೇನೆ.

★ *ಯುವ ಆಕಾಂಕ್ಷಿ ನಟರಿಗೆ ಏನು ಹೇಳುತ್ತೀರಿ?*

ಸುಂದರವಾಗಿ, ಒಳ್ಳೆಯ ದೇಹದಾರ್ಢ್ಯ ಇದ್ದ ಮಾತ್ರಕ್ಕೆ ಅಭಿನಯ ಒಲಿಯುವುದಿಲ್ಲ. ನಿಜಕ್ಕೂ ತುಂಬಾ ಅವಕಾಶಗಳಂತೂ ಇವೆ. ಕಲಿಯುವ ಶ್ರದ್ಧೆ ಇದ್ದರೆ ಖಂಡಿತ ಬೆಳೆಯಬಹುದು.

■ ರಾಗು